ಬಿ. ಚಂದ್ರೇಗೌಡ, ಬೆಂಗಳೂರು
ಹೆಣ್ಣಿಗೂ, ಗಣಿತಕ್ಕೂ ಏನು ಸಂಬಂಧ?



ಎರಡು ಕಡೆಯೂ ಫಿಗರ್ ಗಮನ ಸೆಳೆಯುತ್ತದೆ.

ಎ.ಹೆಚ್. ಪ್ರಸನ್ನ ಗಣಪತಿ, ಊರಿಲ್ಲ
ಇತ್ತೀಚೆಗೆ ರಾಮ್ ಉತ್ತರಗಳು ಮುಂಚಿನ ಮೊನಚು ಕಳೆದುಕೊಳ್ಳುತ್ತಿವೆಯಲ್ಲಾ...?
ದಬ್ಬಳ ಅದೇ; ಚುಚ್ಚಿಸಿಕೊಳ್ಳುವವರ ಚರ್ಮ ದಪ್ಪವಾಗುತ್ತಿದೆಯಂತೆ.

ಅನಿತಾ ನರೇಶ್, ಮಂಚಿ
ಗ್ಯಾಸ್‌ಲೈಟ್‌ನ ಮೆಂಟಲ್‌ಗೂ, ಮನುಷ್ಯ ಮೆಂಟಲ್‌ಗೂ ಏನ್ನಾರ್ ವ್ಯತ್ಯಾಸ?
ಆ ಮೆಂಟಲ್ ಬೆಂಕಿ ಇಟ್ಟವರಿಗೆ ಬೆಳಕು ಕೊಡತ್ತೆ. ಈ ಮೆಂಟಲ್ ಬೆಳಕು ಕೊಡುವವರಿಗೆ ಬೆಂಕಿ ಇಡತ್ತೆ.

ಜೆ.ಆರ್. ಆದಿನಾರಾಯಣಮುನಿ
ಈಗ ಹೆಚ್ಚು ಗಂಡಸರೇ ಹೆಂಗಸರಿಂದ ಶೋಷಣೆಗೆ ಒಳಗಾಗುತ್ತಿದ್ದಾರಲ್ಲಾ...?



ಇದು ಆಗ್ಲೂ ಇದ್ದದ್ದೇ. ತಮ್ಮಾಡ್ಗೆ ರಾಮ ಕೃಷ್ಣ ಅನ್ನೊಂಡಿದ್ದ ಋಷಿಗಳ್ನೂ ಅಪ್ಸರೆಯರು ಶೋಷಿಸ್ತಿದ್ರು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಗುರಿ ಇಲ್ಲದವನ ಬಾಳು ಹೇಗಿರುತ್ತೆ ಸಾರ್?
ಪಿಂಗ್ ಪಾಂಗ್ ಚೆಂಡಿನಂತೆ.

ರಾಜಶೇಖರ ಹಾದಿಮನಿ, ಧಾರವಾಡ
ಆಪದ್ಬಾಂಧವರು ಹತ್ತಿರವಿಲ್ಲವಲ್ಲ! ನಾನೇನು ಮಾಡಲಿ, ಹೋಗಲಾರೆ ಕೊರೊನಾ ಕಾಲದಲ್ಲಿ...?
ವೆರಿಗುಡ್. ಕೊರೊನಾ ಕಾಲದಲ್ಲಿ ತನಗೆ ತಾನೇ ಸಖ. ಬಾಂಧವರು ಆಪತ್ತು!

ಫಾಲನೇತ್ರ ಸಜ್ಜನ, ಶಿರಸಿ
ದುರ್ಯೋಧನನ ಸೊಕ್ಕಿಗೂ, ಚೀನಾದ ಸೊಕ್ಕಿಗೂ ವ್ಯತ್ಯಾಸವೇನು?
ದುರ್ಯೋಧನ ಕಡೆಯ ಆರು ದಿನಗಳು ಮಾತ್ರ ಅಧರ್ಮಯುದ್ಧ ಮಾಡಿದ.

ಎಸ್.ಎನ್. ಮಹಾಬಲರಾವ್, ಎನ್ನಾರ್ಪುರ
ಮೊಗ್ಗು ಮಾತನಾಡಲು ಹೊರಟಿದೆ. ಅರಳುವ ತನಕ ಕಾಯಲೆ?
ಕಾಯದ ಖಯಾಲಿಯ ಕಾಯಿಲೆ ಕೆರಳದಂತೆ ಕಾಯಿರಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಹೆಂಡತಿ ಜೊತೆಗಿದ್ದರೆ ಹೊಂಗೆಯ ತಂಪು ಇದ್ದಂಗ, ಶಿವನ ತಲೆಮ್ಯಾಲೆ ಗಂಗೆ ಇದ್ದಂಗ ಅಂತಾರ. ಹೌದಾ?
ಶಿವನಂತೆಯೇ ಹಿಲ್ ರೆಸಾರ್ಟ್‌ಗಳಲ್ಲಿ ಆಗಾಗ್ಗೆ ಸುತ್ತಾಡಿಸಿದರೆ ಮಾತ್ರ.

ಸಿಹಿಮೊಗೆ ರಮೇಶ್, ಮೈಸೂರು
'ಅ'ಕಾರ 'ಹ'ಕಾರಗಳ ವ್ಯತ್ಯಾಸವೇ ತಿಳಿಯದವರನ್ನು ವಾಹಿನಿಗೆ ಆಯ್ಕೆ ಮಾಡುವರ ಕನ್ನಡ ಇನ್ನು ಹೇಗಿರಬಹುದು?
'ಮಥುವೆಯ ಹೀ ಪಂಥ ಹನುರಾಕದ ಹನುಮಂತ; ಏಲೇಲು ಚನುಮತಲು ತೀರತ ಚಂಪಂಥಾ' ಎಂದು ಹಾಡುವಂತೆ.

ರಾಜೇಶ್ವರಿ ಮಯ್ಯ, ಪುತ್ತೂರು
ಬಹುಮಾನಿತ ಪ್ರಶ್ನೆಗಿರಬೇಕಾದ ಅರ್ಹತೆ ಏನು ರಾಮ್‌ಜೀ?
ಬಹು ಪ್ರಶ್ನೆಗಳ ಮಧ್ಯೆಯೂ ಮಾನ್ಯತೆ ಪಡೆಯುವಂತಿರಬೇಕು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ತುಂಬಾ ಎಚ್ಚರಿಕೆಯಿಂದ ಇರುವವರಿಗೆ ಸಹ ಕೋವಿಡ್ ಬರುತ್ತದೆಯಲ್ಲ...?
ಇವರು ಎಚ್ಚರವಾಗಿದ್ದಾರೆಂದು ಜೊತೆಯವರು ಉಡಾಫೆ ಮಾಡಿದ್ದರ ಪರಿಣಾಮ.

ರಾಜೀವ್ ಮಾಗಲ್, ಸಕಲೇಶಪುರ
ಧಾರಾವಾಹಿಗಳು ಮನರಂಜನೆಗೋ, ಅಪರಾಧಗಳ ಪ್ರೇರಣೆಗೋ?
ಅಪರಾಧಗಳನ್ನು ನೋಡುವುದೇ ಮನರಂಜನೆ ಎಂದು ಜನಮನವನ್ನು ಒಪ್ಪಿಸಲಿಕ್ಕೆ.

## ಬಹುಮಾನಿತ ಪ್ರಶ್ನೆ

ಎಚ್.ಕೆ. ವಿಜಯಕುಮಾರ್, ರಾಯಚೂರು
ದನ ಕೊಂದರೆ ಜೈಲಿಗೆ. ಜನರನ್ನು ಕೊಂದವರು ದೇಶದಾಳ್ವಿಕೆಗೆ. ಇದು ಜನಗಳ ಭಾರತವೋ, ದನಗಳ ಭಾರತವೋ?
ಮತ ಹಾಕುವಾಗ ಮತಿ ಬಳಸದ ಕಾರಣ ಆಳುವವರಿಗೆ ಭುಂಜನ ಭಾರತ, ಪ್ರಜೆಗಳಿಗೆ ರೋದನ ಭಾರತ.

ರತ್ನಜ, ಮೈಸೂರು
'ಸಾವನ್ನು ಅಪ್ಪಿದರು' ಎನ್ನುತ್ತಾರೆ. ಜನರು ಸುಮ್ಮನಿರುವುದು ಬಿಟ್ಟು ಸಾವನ್ನು ಏಕೆ ಅಪ್ಪಬೇಕು?
ಸಾವು ತನ್ನ ಬಾಹುಗಳಲ್ಲಿ ಅಪ್ಪಿದ ರಭಸಕ್ಕೆ ಇವರಿಗೆ ಉಸಿರಾಡಲೂ ಆಗದೆ ಅಸರೆಗಾಗಿ ಅಪ್ಪುವರಂತೆ.

ಎನ್.ವಿ. ಶ್ರೀನಿವಾಸ್, ಮೈಸೂರು
ಮೀಸೆ ಮಾವನಿಗೆ ಬಾಜಿ ಕಟ್ಟಲೆಂದು ಬಂದರೆ, ಮಾವನಿಗೆ ಮೀಸೆಯೇ ಇರಲಿಲ್ಲವಲ್ಲಾ...?
ಹಸೆ ಏರಿದಮೇಲೆ ಮೀಸೆ ವೇಸ್ಟೂಂತ ಬೋಳಿಸ್ಬಿಟ್ಟನಂತೆ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಜ್ಯೋತಿಷಿಗಳು ಕೊರೊನಾ ಬಗ್ಗೆ ಏಕೆ ಭವಿಷ್ಯ ಹೇಳುತ್ತಿಲ್ಲ?



ವಿದೇಶೀ ಗ್ರಹಗಳ ಬಗ್ಗೆ ಅವರಿಗೆ ತಿಳಿದಿಲ್ಲವಂತೆ.

ಆರ್. ಮಧುಸೂದನ್, ಹಾಸನ
ತುಲಾಭಾರ ಮಾಡಿಸಿದರೆ 'ಪಾಪ'ದ ಭಾರ ಇಳಿದೀತೆ?
ಇಳಿಯುತ್ತದೆ ಎನ್ನದಿದ್ದರೆ ಅಪರೂಪಕ್ಕೆ ದೊರಕುವ ದಾನಕ್ಕೂ ಕತ್ತರಿ.

ಎಂ.ಎ. ಕುಮಾರ್, ಬೆಂಗಳೂರು
ಚಿನ್ನವನ್ನು ಪುಟಕ್ಕಿಟ್ಟು ನೋಡು; ಗಂಧವನ್ನು ತೇಯ್ದು ನೋಡು; ರಾಜಕಾರಣಿಗಳನ್ನು?
ದೂರದಿಂದ ನೋಡು; ಹತ್ತಿರ ಬಂದರೆ ಓಡು.

■ ರಾಮ್